1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

Civil Misc.123/2019

PW- 01

ಪ್ರ. ಬೋ. ದಿನಾಂಕಃ 20-06-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಧ್ರಾಕ್ಷಾಯಣಮ್ಮ |
| ತಂದೆ/ಗಂಡನ ಹೆಸರು | : | ಹನುಮಂತಪ್ಪ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಗಂಗನರಸಿ ಗ್ರಾಮ , |

ಈ ದಿನ ನಾನು ಸಲ್ಲಿಸಿರುವ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಪ್ರಮಾಣಪತ್ರದಲ್ಲಿರುವ ಸಹಿ ನನ್ನದಾಗಿದೆ.

ಮುಂದುವರೆದ ಮುಖ್ಯ ವಿಚಾಣೆ ಃ- ಶ್ರೀ ಎಸ್ ಆರ್ ಎ ವಕೀಲರಿಂದ.

ನನ್ನ ಜಮೀನಿನ ಒಂದು ಪಹಣಿ ಪತ್ರಿಕೆ ಹಾಜರುಪಡಿಸಿದ್ದು, ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಗಂಗನರಸಿ ಗ್ರಾಮದ ಸಬ್ ರಿಜಿಸ್ಟರ್ ಮೌಲ್ಯ ಮಾಪನ ಪಟ್ಟಿ ಹಾಜರುಪಡಿಸಿದ್ದು, ಅದನ್ನು ನಿಪಿ. 2 ಎಂದು ಗುರುತಿಸಲಾಯಿತು.

ಪಾಟೀಸವಾಲುಃ- ಎದುರುದಾರರ ಪರ ವಕೀಲರಿಂದ.

ನನ್ನ ಜಮೀನಿನಲ್ಲಿ ವಿದ್ಯುತ್ ಕಂಬ ಒಂದು ಇರುತ್ತದೆ. 2014 ನೇ ಇಸ್ವಿಯಲ್ಲಿ ನನ್ನ ಜಮೀನಿನಲ್ಲಿ ವಿದ್ಯುತ್ ತಂತಿಯನ್ನು ಎಳೆಯಲಾಗಿತ್ತು ಎನ್ನುವುದು ಸರಿ. ಆ ಸಮಯದಲ್ಲಿ ಕಂಪನಿಯವರು ನಮ್ಮ ಊರಿಗೆ ಬಂದು ನನ್ನ ಜೊತೆ ಮಾತನಾಡಿದ ನಂತರ ನಾನು ಅವರಿಗೆ ಜಮೀನಿನಲ್ಲಿ ತಂತಿಯನ್ನು ಎಳೆಯಲು ಅನುಮತಿ ನೀಡಿದೆ ಎನ್ನುವುದು ಸರಿಯಲ್ಲ. ನನ್ನ ಗಂಡ ಸದರಿ ಕಂಪನಿಯವರಿಗೆ ಅಗ್ರಿಮೆಂಟ್ ಮಾಡಿಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಲೈನ್ ಎಳೆಯುವ ಸಂದರ್ಭದಲ್ಲಿ ಪರಿಹಾರವಾಗಿ ಹಣ ಪಡೆದಿದ್ದೇವೆ ಎನ್ನುವುದು ಸರಿಯಲ್ಲ. ನನ್ನ ಜಮೀನು ಮಳೆ ಆಧಾರಿತ ಜಮೀನು ಎನ್ನುವುದು ಸರಿಯಲ್ಲ. ನನ್ನ ಜಮೀನಿನಲ್ಲಿ ಎರಡು ಮಗಳು ಇದ್ದವು, ಕಂಪನಿಯವರು

ಕಡಿದಿರುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮರಹಗಳನ್ನು ಕಡಿದ ಬಗ್ಗೆ ಫೋಟೋ ಹಾಜರುಪಡಿಸಿಲ್ಲ. ಪಹಣಿಯಲ್ಲಿ ನಮೂದು ಇರುವುದಿಲ್ಲ. ಮರಗಳು ಇರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಸಲ್ಲಿಸಿರುವ ಮೌಲ್ಯ ಮಾಪನ ಪಟ್ಟಿ 2018 ನೇ ಇಸ್ವಿಗೆ ಸೇರಿದ್ದು ಎನ್ನುವುದು ಸರಿ. 2014 ರಲ್ಲಿ ಮೌಲ್ಯ ಮಾನ ಪಟ್ಟಿ ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ. ಕಂಪನಿಯವರು ಪರಿಹಾರದ ಹಣ ಕೊಟ್ಟ ನಂತರ ನನ್ನ ಗಂಡ ನನ್ನ ಜಮೀನಿನಲ್ಲಿ ವಿದ್ಯುತ್ ತಂತಿ ಎಳೆಯಲು ಅನುಮತಿ ಕೊಟ್ಟಿದ್ದರು ಎನ್ನುವುದು ಸರಿಯಲ್ಲ. ನನ್ನ ಜಮೀನು ಫಲವತ್ತತೆಯ ಜಮೀನು ಅಲ್ಲ ಎನ್ನುವುದು ಸರಿಯಲ್ಲ. 2014 ರಲ್ಲಿ ನನ್ನ ನನ್ನ ಜಮೀನು ಕೇವಲ ಒಂದು ಲಕ್ಷ ಒಂದು ಎಕರೆಗೆ ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ. ಈಗಾಗಲೇ ಪರಿಹಾರ ಪಡೆದಿರುವುದರಿಂದ ನನಗೆ ಪರಿಹಾರ ಪಡೆಯಲು ಅವಕಾಶ ಇಲ್ಲ ಎನ್ನುವುದು ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ವಿದ್ಯುತ್ ಲೈನ್ ಎಳೆಯುವಾಗ ನನ್ನ ಗಂಡ ಇದ್ದರು ಎನ್ನುವುದು ಸರಿ. ಅವರು ಈಗಾಗಲೇ ಪರಿಹಾರದ ಹಣ ಪಡೆದಿದ್ದಾರೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.